ಹಾಜರುಪಡಿಸಿರುವ ಸ್ಕೀಮ್‌ನ ಪ್ರಕಾರ ಕಾರ್ಮಿಕರ / ನೌಕರರ ಉದ್ಯೋಗ ಮತ್ತು ತತ್ಸಂಬಂಧವಾಗಿ ಷರತ್ತುಗಳು ಸಂಪೂರ್ಣವಾಗಿ ರಕ್ಷಿಸಲ್ಪಟ್ಟಿವೆ.

ದಿನಾಂಕ 27-3-2003ರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೋತ್ತರ

ರಾಜ್ಯದಲ್ಲಿರುವ ಪಶು ಚಿಕಿತ್ಸಾ ಆಸ್ಪತ್ರೆಗಳು

2069 (2535) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪಶು ಚಿಕಿತ್ಸಾಲಯಗಳ ಮತ್ತು ಪಶು ಚಿಕಿತ್ಸಾ ಕೇಂದ್ರಗಳ ಸಂಖ್ಯೆ ಎಷ್ಟು; ರಾಷ್ಟ್ರೀಯ ಕೃಷಿ ಆಯೋಗದ ಸೂತ್ರದ ಸಂಖ್ಯೆಗೆ ಅನುಗುಣವಾಗಿದೆಯೇ; ಕಡಿಮೆ ಇದ್ದಲ್ಲಿ ಎಷ್ಟು ಕಡಿಮೆ ಇದೆ;

ಆ) ಈ ಸಾಲಿನಲ್ಲಿ ಎಷ್ಟು ಪಶುಚಿಕಿತ್ಸಾ ಕೇಂದ್ರವನ್ನು ಮೇಲ್ದರ್ಜೆಗೇರಿಸಲಾಗಿದೆ; ಚಿಕಿತ್ಸಾಲಯಗಳಲ್ಲಿ ವೈದ್ಯ ಮತ್ತು ಇತರೆ ಸಿಬ್ಬಂದಿಗಳ ಖಾಲಿ ಇರುವ ಹುದ್ದೆ ಎಷ್ಟು; ಎಷ್ಟು ಸಮಯದಿಂದ ಖಾಲಿ ಇದೆ; ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳು ಏನು;

ಇ) ಬರುವ ಸಾಲಿನಲ್ಲಿ ಎಷ್ಟು ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲಾಗುವುದು?

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಪಶು ಚಿಕಿತ್ಸಾಲಯಗಳು 1252

ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು 1655

ಇಲ್ಲ.

ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ಜಾನುವಾರು ಘಟಕಗಳಿಗೆ ಒಂದು ಪಶುವೈದ್ಯರು ಒಳಗೊಂಡ ಸಂಸ್ಥೆ ಇರಬೇಕು. ಕರ್ನಾಟಕ ರಾಜ್ಯದಲ್ಲಿ 1.68 ಕೋಟಿ ಜಾನುವಾರು ಘಟಕಗಳಿದ್ದು, 3365 ಪಶುವೈದ್ಯರ ಒಳಗೊಂಡ ಸಂಸ್ಥೆಗಳು ಇರಬೇಕಾಗಿದ್ದು ರಾಜ್ಯದಲ್ಲಿ ಕೇವಲ 1546 ಪಶುವೈದ್ಯರನ್ನೊಳಗೊಂಡ ಸಂಸ್ಥೆಗಳ ಇದ್ದು 1819 ಪಶುವೈದ್ಯರನ್ನೊಳಗೊಂಡ ಸಂಸ್ಥೆಗಳ ಕೊರತೆ ಇರುತ್ತದೆ. ಹಾಲಿ ಕೆಲಸ ನಿರ್ವಹಿಸುತ್ತಿರುವ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಹಂತ ಹಂತವಾಗಿ ಪಶು ಚಿಕಿತ್ಸಾಲಯವನ್ನಾಗಿ ಮೇಲ್ದರ್ಜೆಗೇರಿಸಿ ಪಶುವೈದ್ಯರ ಒಳಗೊಂಡ ಸಂಸ್ಥೆಗಳ ಕೊರತೆಯನ್ನು ಸರಿಪಡಿಸಲಾಗುವುದು.

ಇ) 200 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯನ್ನಾಗಿ ಮೇಲ್ದರ್ಜೆಗೇರಿಸಲಾಗುವುದು.

ಖಾಲಿ ಪಶುವೈದ್ಯ ಅಧಿಕಾರಿಗಳ ಹುದ್ದೆಗಳು 501, ಈ ಹುದ್ದೆಗಳು ಆಸ್ಪತ್ರೆಯಲ್ಲಿ ಖಾಲಿ ಇವೆ. ಈ ಖಾಲಿ ಹುದ್ದೆಗಳು ಆಗ್ಗಿಂದಾಗ್ಗೆ, ಖಾಲಿ ಆಗುತ್ತಿವೆ. ಸಿಬ್ಬಂದಿ ಹುದ್ದೆಗಳು 897, ಈ ಹುದ್ದೆಗಳು 2002 ರಿಂದ ಖಾಲಿ ಇವೆ. ಮೇಲ್ಕಂಡ ಹುದ್ದೆಗಳನ್ನು ಮುಂಬಡ್ತಿ ಮತ್ತು ನೇರ ನೇಮಕಾತಿ ಮೂಲಕ ಪರಿಶೀಲಿಸಿ ಹಂತಹಂತವಾಗಿ ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

ಇ) ಮುಂದಿನ ಸಾಲಿನಲ್ಲಿ 147 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯನ್ನಾಗಿ ಮೇಲ್ದರ್ಜೆಗೇರಿಸಲಾಗುವುದು.

ಮೈಸೂರು ಸಕ್ಕರೆ ಕಾರ್ಖಾನೆಯ ಖಾಸಗೀಕರಣ

2070 (2609) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?